# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1093 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸ್ವಮಿತ್ವ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ ಮತ್ತು ಪೂರ್ಣಗೊಂಡ ಯೋಜನೆಗಳಾವುವು; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸ್ತುತ ಸ್ವಮಿತ್ವ ಯೋಜನೆಯನ್ನು ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಸ್ವಮಿತ್ವ ಯೋಜನೆಗೆ ಇದುವರೆಗೆ ಬಿಡುಗಡೆಯಾದ ಅನುದಾನ ಎಷ್ಟು; | ಕೇಂದ್ರ ಸರ್ಕಾರದಿಂದ ಈ ಯೋಜನೆಯಡಿಯಲ್ಲಿ ಡ್ರೋಣ್ ಸರ್ವೆ ಕಾರ್ಯ ಕೈಗೊಳ್ಳಲು ಅನುದಾನವನ್ನು ನೇರವಾಗಿ ಸರ್ವೆ ಆಫ್ ಇಂಡಿಯಾ ಸಂಸ್ಥೆರವರಿಗೆ ಬಿಡುಗಡೆ ಮಾಡಲಾಗುತ್ತದೆ.<br><br>ಕೇಂದ್ರು ಸರ್ಕಾರವು ಈ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಗೆ ಅರಿವು ಮತ್ತು ಜಾಗೃತಿ ಮೂಡಿಸಲು ಸಭೆ ಆಯೋಜಿಸುವ ಸಲುವಾಗಿ ರೂ.7.75 ಲಕ್ಷಗಳನ್ನು ಮಾತ್ರ ಈವರೆಗೆ ಬಿಡುಗಡೆಗೊಳಿಸಲಾಗಿದೆ. |
| ಇ) | ಸ್ವಮಿತ್ವ ಯೋಜನೆಯ ಮುಖ್ಯ ಉದ್ದೇಶ ಏನು; ಇದರ ಗುರಿ ತಲುಪವಲ್ಲಿ ಸರ್ಕಾರ ಎಷ್ಟು ಯಶಸ್ಸು ಕಂಡಿದೆ; | **ಸ್ವಮಿತ್ವ ಯೋಜನೆಯ ಉದ್ದೇಶ:** ಇದುವರೆಗೂ ಅಳತೆಯಾಗದೆ ಇರುವ ಗ್ರಾಮಠಾಣಾ ಪ್ರದೇಶದ ಆಸ್ತಿಗಳಿಗೆ ಡ್ರೋಣ್ ಮೂಲಕ ಅಳತೆ ಮಾಡಿ ಡಿಜಿಟಲ್ ಮಾಧ್ಯಮದಲ್ಲಿ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ ಗ್ರಾಮೀಣ ಪ್ರದೇಶದ ಆಸ್ತಿದಾರರಿಗೆ ಸ್ವಮಿತ್ವ ಪಿ.ಆರ್. ಕಾರ್ಡ್ ವಿತರಿಸುವುದು.<br><br>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮಿತ್ವ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಇದುವರೆಗೆ ರಾಜ್ಯದ ಒಟ್ಟು 30,715 ಗ್ರಾಮಗಳ ಪೈಕಿ 15,142 ಗ್ರಾಮಗಳಲ್ಲಿ (49.2%) ಡ್ರೋಣ್ ಹಾರಾಟ ಪ್ರಗತಿಯಲ್ಲಿದ್ದು, ಇದುವರೆವಿಗೂ 3684 ಗ್ರಾಮಗಳಲ್ಲಿನ 9.9 ಲಕ್ಷ ಆಸ್ತಿದಾರರಿಗೆ ಸ್ವಮಿತ್ವ ಪಿ.ಆರ್. ಕಾರ್ಡ್‌ಗಳನ್ನು ವಿತರಿಸಲಾಗಿದೆ.<br><br>ಸ್ವಮಿತ್ವ ಯೋಜನೆಯು ಯಶಸ್ವಿಯಾಗಿ ಮುಂದುವರೆದ ಯೋಜನೆಯಾಗಿದ್ದು, ಅನುಷ್ಠಾನದ ಹಂತದಲ್ಲಿದೆ. ಮಾರ್ಚ್-2025ರ ಅಂತ್ಯಕ್ಕೆ ಎಲ್ಲಾ ಗ್ರಾಮಠಾಣಾ ಪ್ರದೇಶಗಳ ಡ್ರೋಣ್ ಹಾರಾಟ ಪ್ರಗತಿ ಪೂರ್ಣಗೊಳಿಸುವ ಗುರಿ ಹೊಂದಲಾಗಿರುತ್ತದೆ. |
| ಈ) | ದಾಖಲೆ ಕೊಠಡಿಯಲ್ಲಿ ಹಳೆಯ ದಾಖಲಾತಿಗಳು ಕಾಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | ದಾಖಲೆ ಕೊಠಡಿಯಲ್ಲಿ ಹಳೆಯ ದಾಖಲಾತಿಗಳು ಕಾಣೆಯಾಗುತ್ತಿರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳು:-<br><br>1. ರಾಜ್ಯದಲ್ಲಿ ಸ್ವಮಿತ್ವ ಯೋಜನೆಯನ್ನು ಅಧುನಿಕ ತಂತ್ರಾಜ್ಞಾನ ಆಧಾರಿತ ಉಪಕರಣಗಳಾದ ಡ್ರೋಣ ಮೂಲಕ ಸರ್ವೆ ಕಾರ್ಯ ಕೈಗೊಂಡು ತದನಂತರದ ಎಲ್ಲಾ ಹಂತಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ದಾಖಲೆಗಳು ಮತ್ತು ಇತರೆ ಎಲ್ಲಾ ಮಾಹಿತಿಯು |

<table>
<tr><td></td><td></td><td>ಸುರಕ್ಷಿತವಾಗಿ ಡಾಟಾ ಬೇಸ್‌ನಲ್ಲಿ ನಿರ್ವಹಿಸುವ ಮೂಲಕ ಸಮಗ್ರ ಡಿಜಿಟಲ್ ಮಾಹಿತಿಯನ್ನು State Data Centreನಲ್ಲಿ ಸಂರಕ್ಷಿಸಲಾಗುವುದರಿಂದ ಸ್ವಾಮಿತ್ವ ಯೋಜನೆಯ ಯಾವುದೇ ದಾಖಲಾತಿಗಳು ಕಳೆದು ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.<br>2. ಭೂಮಾಪನ ಇಲಾಖೆಯ ಅಮೂಲ್ಯ ಭೂದಾಖಲೆಗಳಾದ 1) ಟಿಪ್ಪಣಿ ಪುಸ್ತಕ, 2) ಪಕ್ಕಾ ಪುಸ್ತಕ, 3) ಪ್ರತಿ ಪುಸ್ತಕ, 4) ಅಟ್ಲಾಸ್, ಇತ್ಯಾದಿ ಭೂದಾಖಲೆಗಳನ್ನು 2012ನೇ ಸಾಲಿನಲ್ಲಿ ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸಲಾಗಿರುತ್ತದೆ ಮತ್ತು 2012ರ ನಂತರದಲ್ಲಿ, ಭೂದಾಖಲೆಗಳ ನಕಲು ಕೋರಿ ಬರುವ ಅರ್ಜಿಗಳಿಗೆ ಸಂಬಂಧಿಸಿದ ಭೂದಾಖಲೆಗಳನ್ನು ಈಗಾಗಲೇ ಸ್ಕ್ಯಾನಿಂಗ್ ಆಗಿರದಿದ್ದಲ್ಲಿ, ಸ್ಕ್ಯಾನ್ ಮಾಡಿ ನಂತರವೇ ಸಾರ್ವಜನಿಕರಿಗೆ ಒದಗಿಸಲಾಗುತ್ತಿದ್ದು, ಸದರಿ ದಾಖಲೆಗಳನ್ನು ಡಾಟಾ ಬೇಸ್‌ನಲ್ಲಿ ಸಂರಕ್ಷಿಸಲಾಗುತ್ತಿದೆ.<br>3. ಭೂದಾಖಲೆಗಳ ಪ್ರಮುಖ ದಾಖಲೆಯಾದ ಆಕಾರಬಂದ್ ಡಿಜಿಟೈಸೇಷನ್ ಕಾರ್ಯವನ್ನು ಇಲಾಖಾ ವತಿಯಿಂದ ಪ್ರಾರಂಭಿಸಿದ್ದು, ಈವರೆಗೆ 1 ಕೋಟಿಗೂ ಹೆಚ್ಚು ದಾಖಲೆಗಳನ್ನು ಡಿಜಿಟೈಸ್ ಮಾಡಲಾಗಿದೆ.<br>4. ರಾಜ್ಯದಲ್ಲಿರುವ ಸುಮಾರು 30,662 ಗ್ರಾಮ ನಕಾಶೆಗಳನ್ನು ಕರ್ನಾಟಕ ದೂರ ಸಂವೇದಿ ಅನ್ವಯಿಕ ಸಂಸ್ಥೆಯ (KSRSAC) ಸಹಯೋಗದೊಂದಿಗೆ ಡಿಜಿಟೈಸ್ ಮಾಡಲಾಗಿದೆ.<br>5. ಮುಂದುವರೆದು ಇಲಾಖೆ ವತಿಯಿಂದ ಎಲ್ಲಾ ಸರ್ವೆ ನಂಬರ್‌ಗಳಲ್ಲಿಯ ಹಿಸ್ಸಾ ದಾಖಲೆಗಳನ್ನು ಸಹ KSRSAC ಸಂಸ್ಥೆಯ ಸಹಯೋಗದೊಂದಿಗೆ ಡಿಜಿಟೈಸ್ ಮಾಡಲಾಗುತ್ತಿದೆ. ರಾಜ್ಯದ ಒಟ್ಟು 1.80 ಕೋಟಿ ದಾಖಲೆಗಳ ಪೈಕಿ 1.31 ಕೋಟಿ ದಾಖಲೆಗಳ ಡಿಜಿಟೈಸ್ ಮತ್ತು ಜಿಯೊರೆಫರೆನ್ಸ್ (Geo-Reference) ಈಗಾಗಲೇ ಮಾಡಲಾಗಿದೆ.<br>6. ಸ್ಕ್ಯಾನ್ಡ್ ಭೂದಾಖಲೆಗಳು ಮತ್ತು ಡಿಜಿಟೈಸ್ ಆಕಾರಬಂದ ಹಾಗೂ ಡಿಜಿಟೈಸ್ ಹಿಸ್ಸಾ ದಾಖಲೆಗಳನ್ನು ಸಾರ್ವಜನಿಕರು ಆನ್‌ಲೈನ್‌ನಲ್ಲಿ ಉಚಿತವಾಗಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.</td></tr>
<tr><td>ಉ)</td><td>ರಾಜ್ಯದಲ್ಲಿ ಎಷ್ಟು ದರಖಾಸ್ತು ಪೋಡಿ ಪ್ರಕರಣಗಳು ಇವೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td rowspan="2">ರಾಜ್ಯದಲ್ಲಿ ಹಲವಾರು ದಶಕಗಳಿಂದ ಭೂ ಮಂಜೂರಾದ ಪ್ರಕರಣಗಳು ಇದ್ದು, ಮೊದಲ ಬಾರಿಗೆ ಇವುಗಳ ಸಮಗ್ರ ಮಾಹಿತಿಯನ್ನು ಕಲೆ ಹಾಕಲಾಗುತ್ತಿದ್ದು, ಈವರೆಗೆ ಸುಮಾರು 1,96,000 ಮಂಜೂರಾತಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024 ದಿನಾಂಕ 25-11-2024 ರಲ್ಲಿ ದರಖಾಸ್ತು ಪೋಡಿ ದುರಸ್ತಿ ಕುರಿತು ನಮೂನೆ 1-5 ಮತ್ತು 6-10ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಣ ಗೊಳಿಸಲಾಗಿದೆ ಹಾಗೂ ಸರ್ಕಾರಿ ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ದುರಸ್ತಿಪಡಿಸುವಂತೆ ಸೂಚಿಸಿದೆ.</td></tr>
<tr><td>ಊ)</td><td>ವಿವಿಧ ಹಂತದಲ್ಲಿರುವ ಎಷ್ಟು ಪ್ರಕರಣಗಳು ಎಷ್ಟು ದಿನಗಳಿಂದ ಬಾಕಿ ಇದೆ? (ಜಿಲ್ಲಾ ವಾರು ಮಾಹಿತಿ ನೀಡುವುದು)</td></tr>
</table>

| | | |
|---|---|---|
| | | ಜಮೀನುಗಳ ಪೋಡಿ ದುರಸ್ತಿ ಕಾರ್ಯವನ್ನು ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ನಮೂನೆ 1-5 ಗಳ ಭರ್ತಿ ಮತ್ತು ಅನುಮೋದನೆ ಹಾಗೂ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಲು ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಅದರಂತೆ ಆನ್‌ಲೈನ್‌ನಲ್ಲಿ ಈವರೆಗೂ ಸುಮಾರು 1,14,852 ಪ್ರಕರಣಗಳನ್ನು ತಂತ್ರಾಂಶದಲ್ಲಿ ನಮೂದಿಸಿ, ಇವುಗಳ ಪೈಕಿ ಮೂಲ ದಾಖಲಾತಿಗಳು ಲಭ್ಯವಿರುವ ಪ್ರಕರಣಗಳನ್ನು ಗುರುತಿಸಿ ತುರ್ತಾಗಿ ದರಖಾಸ್ತು ಪೋಡಿ ಕೈಗೊಳ್ಳುವ ಆಂದೋಲನವನ್ನು ಈಗಾಗಲೇ ಪ್ರಾರಂಭಿಸಲಾಗಿದೆ.<br><br>ಯಾವುದೇ ಭೂಮಂಜೂರಿ ಕಡತದಲ್ಲಿ ಕನಿಷ್ಠ **i)**ಅಧಿಕೃತ ಜ್ಞಾಪನ/ದರಖಾಸ್ತು ವಹಿ/ಮಂಜೂರಿ ನಡವಳಿ ವಹಿ, **ii)** ಸಾಗುವಳಿ ಚೀಟಿ/ಸಾಗುವಳಿ ಚೀಟಿ ವಿತರಣಾ ವಹಿ, **iii)**ಚಾಲ್ತಿ ಪಹಣಿ, ದಾಖಲೆಗಳಿದ್ದಲ್ಲಿ, ತಹಶೀಲ್ದಾರರು ಮಂಜೂರಿ ಕಾಲದ ಮ್ಯುಟೇಷನ್ ಹಾಗೂ ತತ್ಸಂಬಂಧಿತ ದಾಖಲೆಗಳನ್ವಯ ಮಂಜೂರಿ ನೈಜತೆಯನ್ನು ಪರಿಶೀಲಿಸಿಕೊಂಡು ಪ್ರಕರಣಗಳನ್ನು ಅಳತೆಗೆ ಒದಗಿಸಲು ಮತ್ತು ತಹಶೀಲ್ದಾರರು ಮಂಜೂರಿ ನೈಜತೆಯಿಂದ ಕೂಡಿದೆ ಎಂದು ಆದೇಶಿಸಿದ ನಂತರ, ಸರ್ವೆ ಅಧಿಕಾರಿಗಳು ಅರ್ಹ ಪ್ರಕರಣಗಳಲ್ಲಿ 30 ದಿನಗಳೊಳಗಾಗಿ ಅಳತೆ ಪೋಡಿ ಕಾರ್ಯ ಕೈಗೊಳ್ಳಲು ಸೂಚಿಸಲಾಗಿದ್ದು, ಈಗಾಗಲೇ ಈ ಪ್ರಕ್ರಿಯೆಯು ರಾಜ್ಯಾದ್ಯಂತ ಜಾರಿಯಲ್ಲಿದೆ.<br><br>ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಋ) | ಎಷ್ಟು ಪ್ರಕರಣಗಳು 6 ರಿಂದ 10 ಮಾಡಲು ಸರ್ವೆ ಇಲಾಖೆಗೆ ಕಳುಹಿಸಲಾಗಿದೆ; ಇದರಲ್ಲಿ ಎಷ್ಟು ಪ್ರಕರಣಗಳು ಪೂರ್ಣಗೊಂಡಿರುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ನವೆಂಬರ್–2024ರ ಅಂತ್ಯಕ್ಕೆ ಒಟ್ಟು 1572 ಪ್ರಕರಣಗಳಲ್ಲಿ 6-10 ಮಾಡಲು ಸರ್ವೆ ಇಲಾಖೆಗೆ ಕಳುಹಿ ಸಲಾಗಿದ್ದು, ಈ ಪೈಕಿ 674 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, 898 ಪ್ರಕರಣಗಳು ಬಾಕಿ ಇರುತ್ತವೆ. |
| ಎ) | ಸರ್ಕಾರಿ ಜಮೀನಿನಲ್ಲಿ 1 ರಿಂದ 5 ಹಾಗೂ 6 ರಿಂದ 10 ಮಾಡದೇ ಪೋಡಿಗಳನ್ನು ಮಾಡಲಾಗಿದೆಯೇ? (ಪ್ರಕರಣಗಳ ಜಿಲ್ಲಾ ವಾರು ಸರ್ವೆ ನಂಬರ್ ಸಹಿತ ನೀಡುವುದು) | ದರಖಾಸ್ತು ಪೋಡಿ ಪ್ರಕರಣಗಳನ್ನು ನಮೂನೆ-1-5 ಹಾಗೂ 6-10 ಸಿದ್ಧಪಡಿಸಿಕೊಂಡೇ ವಿಲೇವಾರಿ ಮಾಡಲಾಗುತ್ತಿದೆ. ಇದನ್ನು ಹೊರತುಪಡಿಸಿ ಪೋಡಿ ಮಾಡಲಾಗಿರುವುದಿಲ್ಲ. |

**ಸಂಖ್ಯೆ: ಕಂಇ 209 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ರಾಜ್ಯದಲ್ಲಿ ಸ್ವಮಿತ್ವ ಸರ್ವೆ ಕಾರ್ಯದ ಪ್ರಗತಿ (ಅನುಬಂಧ-1)

| ಕ್ರ | ಜಿಲ್ಲೆಯ ಹೆಸರು | ಡ್ರೋಣ್ ಹಾರಾಟ ಪೂರ್ಣಗೊಂಡ ಗ್ರಾಮ ಗಳು | ORI ನಕ್ಷೆ ಸ್ವೀಕೃತವಾದ ಗ್ರಾಮಗಳು | ಸ್ಥಳ ಪರಿಶೀಲನೆ ಪೂರ್ಣ ಗೊಂಡಿ ರುವ ಗ್ರಾಮಗಳು | ಡಿಜಟಲೀಕರಣ ಪೂರ್ಣ ಗೊಂಡ ಗ್ರಾಮಗಳು | ಕರಡು ಆಸ್ತಿ ಪ್ರಕಟಣಾ ಪತ್ರ ವಿತರಿಸಲಾದ ಗ್ರಾಮಗಳು |
|---|---|---|---|---|---|---|
| 1 | ಹಾಸನ | 1482 | 863 | 716 | 709 | 671 |
| 2 | ತುಮಕೂರು | 1475 | 1059 | 779 | 763 | 691 |
| 3 | ರಾಮನಗರ | 811 | 811 | 805 | 802 | 798 |
| 4 | ದಾವಣಗೆರೆ | 784 | 196 | 187 | 186 | 183 |
| 5 | ದಕ್ಷಿಣ ಕನ್ನಡ | 82 | 82 | 80 | 80 | 80 |
| 6 | ಮೈಸೂರು | 361 | 361 | 361 | 361 | 361 |
| 7 | ಬೆಳಗಾಂ | 329 | 203 | 91 | 87 | 87 |
| 8 | ಧಾರವಾಡ | 42 | 42 | 42 | 42 | 42 |
| 9 | ಗದಗ | 299 | 59 | 18 | 17 | 17 |
| 10 | ವಿಜಯಪುರ | 676 | 53 | 53 | 53 | 53 |
| 11 | ಕಲಬುರಗಿ | 906 | 176 | 176 | 176 | 176 |
| 12 | ಕೊಪ್ಪಳ | 596 | 102 | 95 | 95 | 93 |
| 13 | ರಾಯಚೂರು | 862 | 106 | 104 | 104 | 104 |
| 14 | ಯಾದಗಿರಿ | 387 | 29 | 29 | 29 | 29 |
| 15 | ಚಾಮರಾಜನಗರ | 432 | 19 | 17 | 17 | 6 |
| 16 | ಚಿಕ್ಕಮಗಳೂರು | 427 | 12 | 4 | 4 | 4 |
| 17 | ಕೋಲಾರ | 1294 | 272 | 223 | 208 | 151 |
| 18 | ಚಿಕ್ಕಬಳ್ಳಾಪುರ | 1317 | 216 | 58 | 45 | 45 |
| 19 | ಚಿತ್ರದುರ್ಗ | 890 | 164 | 126 | 113 | 74 |
| 20 | ಬಳ್ಳಾರಿ | 308 | 227 | 35 | 8 | 8 |
| 21 | ಶಿವಮೊಗ್ಗ | 5 | 5 | 1 | 1 | 1 |
| 22 | ಬಿದರ್ | 385 | 0 | 0 | 0 | 0 |
| 23 | ಕೊಡಗು | 0 | 0 | 0 | 0 | 0 |
| 24 | ಉಡುಪಿ | 3 | 0 | 0 | 0 | 0 |
| 25 | ಹಾವೇರಿ | 372 | 0 | 0 | 0 | 0 |
| 26 | ಉತ್ತರ ಕನ್ನಡ | 85 | 70 | 0 | 0 | 0 |
| 27 | ವಿಜಯನಗರ | 362 | 197 | 11 | 11 | 11 |
| 28 | ಮಂಡ್ಯ | 170 | 0 | 0 | 0 | 0 |
| 29 | ಬಾಗಲಕೋಟೆ | 0 | 0 | 0 | 0 | 0 |
| 30 | ಬೆಂಗಳೂರು ನಗರ | 0 | 0 | 0 | 0 | 0 |
| 31 | ಬೆಂಗಳೂರು ಗ್ರಾಮಾಂತರ | 0 | 0 | 0 | 0 | 0 |
| | ಒಟ್ಟು | **15,142** | **5,324** | **4,011** | **3,911** | **3,684** |

## ಅನುಬಂಧ-2

| DISTRICTNAME | Number of requests created in 1 to 5 system |
|---|---|
| Bagalkote | 529 |
| Ballari | 2232 |
| Belagavi | 1666 |
| Bengaluru Rural | 1802 |
| Bengaluru Urban | 2652 |
| Bidar | 1961 |
| Chamarajanagara | 1093 |
| Chikkaballapur | 3884 |
| Chikkamagaluru | 5995 |
| Chitradurga | 3634 |
| Dakshina Kannada | 30580 |
| Davanagere | 1931 |
| Dharwad | 1579 |
| Gadag | 303 |
| Hassan | 7393 |
| Haveri | 703 |
| Kalaburagi | 2971 |
| Kodagu | 2996 |
| Kolar | 5014 |
| Koppal | 2200 |
| Mandya | 3551 |
| Mysuru | 2610 |
| Raichur | 1351 |
| Ramanagara | 1886 |
| Shivamogga | 3415 |
| Tumakuru | 7053 |
| Udupi | 6846 |
| Uttar Kannada | 1278 |
| Vijayanagara | 2200 |
| Vijayapura | 1554 |
| Yadagir | 1990 |
| **Total** | **1,14,852** |